

ಜೋರಾಗಿ ಒದೆಯಲು ಹೋದಳು. ಸೊಂಯಕ್ಕನೆ ಕಾಲು ಜಾರಿ ಶರೀರದ ಜೋಲಿ ತಪ್ಪಿತು. ದಡದಡ ಉರುಳಿದ ಅವಳ ಸ್ಥೂಲಕಾಯ ಜೋರಾಗಿ ಸದ್ದು ಮಾಡಿತು. ಪದುಮಣ್ಣ, ವಲ್ಲರಿಯ ಜೊತೆಗೆ ಇಬ್ಬರು ಕಕ್ಷಿದಾರರೂ ಓಡೋಡಿ ಬಂದರು. ಎಲ್ಲರೂ ಸೇರಿ ಕಾರಲ್ಲಿ ಮಲಗಿಸಿ ಆಸ್ಪತ್ರೆಗೆ ಕರೆದೊಯ್ದರು. ದಾರಿಯುದ್ದಕ್ಕೂ ಪದುಮಣ್ಣ, 'ನಾಗೂ ಎಂತಾಯ್ತೆ ಮಾರಾಯ್ತಿ, ನೀ ಅಲ್ಲಿ ಯಂತಕ್ಕೆ ಬಂದಿದ್ಯೆ?' ಎಂದು ಬಡಬಡಿಸುತ್ತಿದ್ದ. ನಾಗಕ್ಕನನ್ನು ಪರೀಕ್ಷಿಸಿದ ಡಾಕ್ಟರು ಬಿ.ಪಿ., ಶುಗರ್ ಎರಡೂ ಹೆಚ್ಚಾಗಿದೆ, ತಾತ್ಕಾಲಿಕವಾಗಿ ಮಾತಾಡಲು ತೊಂದರೆಯುಂಟಾಗಿದೆ, ತಾಳ್ಮೆಯಿಂದ ಚಿಕಿತ್ಸೆ ಮಾಡಿಸಿಕೊಳ್ಳಬೇಕು, ಆರಾಮಾಗುತ್ತದೆ ಎಂದರು. ಗಾಬರಿಯಾಗಿದ್ದ ಪದುಮಣ್ಣ ವಾರ್ಡಿನಿಂದ ಹೊರಬಂದು ಕುಸು ಕುಸು ಅಳತೊಡಗಿದ. ಜೊತೆಗೆ ಬಂದಿದ್ದ ಕಕ್ಷಿದಾರರ ಪೈಕಿ ಮೊದಲಿಂದಲೂ ವಹಿವಾಟಿದ್ದ ಅನಂತ ಹೆಗಲು ತಬ್ಬಿ ಸಂತೈಸಿದ. 'ಅಲ್ದಾ, ಪದುಮಣ್ಣ ಇದಕ್ಕೆಲ್ಲ ಹೆದರ್ತವನ. ಈಗಿನ ಕಾಲದಲ್ಲಿ ಬೇಕಷ್ಟು ನಮನಿ ಔಷಧ ಸಿಗ್ತಪ. ಯಾರ ಮನೆಲಿ ಜಗಳ ಇರ್ತಿಲ್ಯ, ನಮ್ಮ ಯಕ್ಷಗಾನದಲ್ಲಿ ಎರಡೇ ನಮನಿ ಪ್ರಸಂಗ ಇರ್ತು. ಕಾಳಗ ಅಥವಾ ಕಲ್ಯಾಣ. ಕಾಳಗ ಆದ ಮೇಲೆ ಕಲ್ಯಾಣ ಆಗ್ತು ಅಥವಾ ಕಲ್ಯಾಣ ಆದಮೇಲೆ ಕಾಳಗ ಆಗ್ತು' ಅವನ ಮಾತು ಮುಗಿಯುವ ಮೊದಲೇ ಅವನ ಜೊತೆ ಬಂದಿದ್ದ ನಾಗೇಶ ಗಬಕ್ಕನೆ ಪದುಮಣ್ಣನ ಕೈ ಹಿಡಿದುಕೊಂಡ. 'ವಕೀಲ್ರೆ ನಿಮಗೊಂದು ವಿಷಯ ಹೇಳ್ತೆ ಕೇಳಿ, ನಿಮ್ಮ ಹೆಂಡ್ತಿಯೊಳಗೊಬ್ಬ ಅದ್ಭುತ ನಟಿ ಇದಾಳೆ, ಆವಾಗ್ನಿಂದನೂ ನೋಡ್ತಾನೆ ಇದೇನೆ, ಅವರ ರೋಷ-ಆವೇಶ ಆಹಾ ಅದ್ಭುತರೀ, ನಂದೊಂದು ಸ್ತ್ರೀ ಯಕ್ಷಗಾನ ಮೇಳ ಉಂಟು. ಎಂಟು ಕಲಾವಿದೆಯರಿದಾರೆ, ದೇಶ-ವಿದೇಶದಲ್ಲೆಲ್ಲ ಪ್ರದರ್ಶನ ಕೊಡ್ತೇವೆ, ಆದರೆ ನಾವು ಮಾಡೂದೆಲ್ಲ ಸೌಮ್ಯ ಕಥೆಯಿರೂ ಪ್ರಸಂಗ. ಯಾಕಂದ್ರೆ ನಮ್ಮಲ್ಲಿ ರೌದ್ರ ರಸಧಾರಸಕಳೂ ತಾಕತ್ತು ಯಾರಿಗೂ ಇಲ್ಲಾಗಿತ್ತು. ಬಣ್ಣದ ವೇಷ ಮಾಡೂ ಹೆಂಗಸರು ಸಿಗೂದು ಅಪರೂಪ, ನಂಗದೇ ಕೊರಗಾಗಿತ್ತು ಮಾರ್ರೇ, ಇವತ್ತು ನಿಮ್ಮ ಹೆಂಡ್ತಿ ನೋಡಿ ಭಾರಿ ಖುಷಿಯಾಯ್ತು ಅಣ್ಣಾ, ನಿಮಗೆ ಸಂಭಾವನೆ ಕೇಳದಷ್ಟು ಕೊಡ್ತೆನ್ರೀ, ದಯವಿಟ್ಟು ಇಲ್ಲಾ ಅನ್ಬೇಡಿ, ನಿಮ್ಮ ಹೆಂಡ್ತೀನ ನಮ್ಮ ಮ್ಯಾಳಕ್ಕೆ ಕಳಸಕೊಡ್ಲೇ ಬೇಕ್ರಿ, ಅವರು ಬಂದರೆ ನಾವು ದಕ್ಷಯಜ್ಞ, ಭಸ್ಮಾಸುರ ಮೋಹಿನಿ ಹಿಂಗಿದ್ದೆಲ್ಲ ಪ್ರಸಂಗ ತಕಳಬಹುದ್ರಿ, ಚಪ್ಪೆ ಪ್ರಸಂಗ ಮಾಡಿ ಮಾಡಿ ನಂಗಂತೂ ರಾಶಿ ಬ್ಯಾಜಾರಾಗಿತ್ರಿ, ನಿಮ್ಮ ಕಾಲಿಗೆ ಬೀಳ್ತೆ ಮರ್ರೆ, ದಯವಿಟ್ಟು ಒಪ್ಗಳ್ರಿ' ಅಷ್ಟರಲ್ಲಿ ನಾಗಲಕ್ಷ್ಮಿಯ ಕೋಣೆಯಿಂದ ಡಣ್ ಡಣ್ ಅಂತ ಪಾತ್ರೆ ಎಸೆದ ಜೋರಾದ ಶಬ್ದ ಕೇಳಿತು.

ದೊಡ್ಡ ಗಂಟಲಿನಲ್ಲಿ ಬೈದು, ಆವೇಶದಿಂದ ಕೂಗುವುದೇ ತನ್ನ ಪ್ರಬಲ ಅಸ್ತ್ರವಾಗಿತ್ತು. ಹೀಗೆ ಮಾತು ಹೊರಬರದೇ, ತಾನು ಮಲಗಿದಲ್ಲೇ ಮಲಗಿದರೆ ಪದುಮಣ್ಣ-ವಲ್ಲರಿಯರನ್ನು ಹಿಡಿಯುವವರೇ ಇಲ್ಲೆಂಬ ಆಲೋಚನೆ ಬಂದಿದ್ದೇ ನಾಗಲಕ್ಷ್ಮಿಯ ಜೀವಕ್ಕೆ ಭುಗಿಲ್ಲನೆ ಬೆಂಕಿ ಇಟ್ಟಂತಾಯಿತು. ಚಾಚಿದ ಬಲಗೈಗೆ ನೀರಿನ ಚೊಂಬು ಸಿಕ್ಕಿದ್ದೇ ತಡ ಬೀಸಿ ಎಸೆದಳು. ಜಗ್ಗಿನಿಂದ ಸುರಿದ ನೀರು ಕಾಲುವೆಯಂತೆ ಹರಿಯುತ್ತಿತ್ತು. ಗಾಬರಿಯಿಂದ ಓಡಿ ಬಂದ ಡಾಕ್ಟರ್ ನೀರಲ್ಲಿ ಜಾರಿದವರೇ ದಢಾರನೆ ಬಿದ್ದರು. ಟಣ್ ಟಣ್ ಸದ್ದು ಮಾಡುತ್ತ, ಚೊಂಬು ಮಹಡಿ ಮೆಟ್ಟಿಲುಗಳನ್ನು ಒಂದೊಂದಾಗಿ ಇಳಿಯುತ್ತ, ಪ್ರತಿ ಮೆಟ್ಟಿಲಿಗೊಮ್ಮೆ ಟಣ್ ಎಂದು ತಲೆ ಗುದ್ದಿಕೊಳ್ಳುತ್ತ ಉರುಳುತ್ತಲೇ ಇತ್ತು. ಅನಂತ ಮತ್ತು ನಾಗೇಶ ಡಾಕ್ಟ್ರನ್ನು ಎಬ್ಬಿಸಿ ಹಿಡಿದುಕೊಂಡರೆ ಪದುಮಣ್ಣ ಮಾತ್ರ ಸ್ಟೀಲು ಚೊಂಬನ್ನು ಎತ್ತಿಕೊಂಡು ಕೈಲಿ ಹಿಡಿದು ಪರೀಕ್ಷಿಸುತ್ತ 'ಓಹೋ ಇದು ನೀಲಕಮಲ್ ಅಲ್ಲ, ಅದಕ್ಕೆ ಇಷ್ಟು ನೆಗ್ಗಿ ಹೋಯ್ತು, ಡಾಕ್ಟ್ರೇ ನೀವು ನೆನಪಿಟ್ಕೊಂಡು ನೀಲಕಮಲ್ ಪಾತ್ರೆ ತಗೊಳ್ಳಿ, ಚೊಲೊ ಬಾಳಿಕೆ ಬರ್‍ತದೆ' ಎಂದ. ಬಿದ್ದ ನೋವನ್ನೂ ಮರೆಯುವಷ್ಟು ಬೆರಗು ತುಂಬಿಕೊಂಡ ಡಾಕ್ಟರ್ ಪೆದ್ದುಪೆದ್ದಾಗಿ ಪದುಮಣ್ಣನನ್ನು ನೋಡುತ್ತ ನಿಂತುಕೊಂಡರು. ●